ಕರ್ನಾಟಕ ವಿಧಾನ ಪರಿಷತ್ತು

1) ಚುಕ್ಕೆ ಗುರುತಿನ ಪ್ರಶ್ನೆ ಸಂಖ್ಯೆ : 228

2) ಸದಸ್ಯರ ಹೆಸರು : ಶ್ರೀ ಎಸ್.ಎಲ್. ಭೋಜೇಗೌಡ (ಶಿಕ್ಷಕರ ಕ್ಷೇತ್ರ)

3) ಉತ್ತರಿಸುವ ದಿನಾಂಕ : 04-03-2020

4) ಉತ್ತರಿಸಬೇಕಾದ ಸಚಿವರು : ಮುಜರಾಯಿ, ಮೀನುಗಾರಿಕೆ ಹಾಗೂ ಬಂದರು ಮತ್ತು ಒಳನಾಡು ಜಲಸಾರಿಗೆ ಸಚಿವರು

	ಪ್ರಶ್ನೆ	ಉತ್ತರ
ಅ)	ಮೀನುಗಾರಿಕೆ ಇಲಾಖೆಯ ವಿವಿಧ ವೃಂದದ ಅಧಿಕಾರಿಗಳಿಗೆ ನೀಡಲಾಗುತ್ತಿರುವ ವೇತನ ಇತರೆ ರಾಜ್ಯಗಳಿಗಿಂತ ಕಡಿಮೆ ಇರುವುದು ಸರ್ಕಾರದ ಗಮನಕ್ಕೆ ಬಂದಿದೆಯೇ; (ವಿವರ ನೀಡುವುದು)	ಕರ್ನಾಟಕ ರಾಜ್ಯ ಮತ್ತು ವಿವಿಧ ರಾಜ್ಯಗಳಲ್ಲಿ ಪ್ರತಿಯೊಂದು ಹುದ್ದೆಗಳ ಪದನಾಮ, ವಿದ್ಯಾರ್ಹತೆ ಕರ್ತವ್ಯ ಮತ್ತು ಜವಾಬ್ದಾರಿ, ಕಾರ್ಯವ್ಯಾಪ್ತಿ ಹಾಗೂ ನೇಮಕಾತಿ ವಿಧಾನಗಳು ಬೇರೆ ಬೇರೆ ಆಗಿರುವುದರಿಂದ ಯಾವುದೇ ರಾಜ್ಯ ಸರ್ಕಾರಗಳು ನೀಡುವ ವೇತನವನ್ನು ಇತರೆ ರಾಜ್ಯಗಳಿಗೆ ತುಲನೆ ಮಾಡುವುದು ಸಮಂಜಸವಲ್ಲ. ಆಯಾ ರಾಜ್ಯ ಸರ್ಕಾರಗಳು ಅವುಗಳ ಸಂಪನ್ಮೂಲದ ಆಧಾರದ ಮೇಲೆ ವೇತನವನ್ನು ನಿರ್ಧರಿಸುತ್ತವೆ. ರಾಜ್ಯದ ವಿವಿಧ ಇಲಾಖೆಗಳ ಸಿವಿಲ್ ಸೇವೆಯ ವಿವಿಧ ಶ್ರೇಣಿಯ / ವೃಂದದ ವೇತನ ಶ್ರೇಣಿಯನ್ನು ಆಗ್ಗಿಂದಾಗ್ಗೆ, ನಿಗಧಿತ ಸಮಯ ಮತ್ತು ರಾಜ್ಯದ ಆರ್ಥಿಕತೆಯ ಸಂಪನ್ಮೂಲದ ಲಭ್ಯತೆಗೆ ಅನುಗುಣವಾಗಿ ವೇತನ ಆಯೋಗವು ಅಭ್ಯಸಿಸಿ, ವಿಶ್ಲೇಷಿಸಿ, ವೈಜ್ಞಾನಿಕವಾಗಿ, ಶಾಸನಬದ್ಧ ಕರ್ತವ್ಯಗಳಿಗೆ ಅನುಗುಣವಾಗಿ ಮಾಡಿರುವ ಶಿಫಾರಸ್ಸಿನಂತೆ ನಿಗದಿಪಡಿಸ ಲಾಗುತ್ತಿದೆ. ಅದರನ್ವಯ ಮೀನುಗಾರಿಕೆ ಇಲಾಖೆಯ ಎಲ್ಲಾ ಹುದ್ದೆಗಳಿಗೆ ವೇತನ ಶ್ರೇಣಿಯನ್ನು ನಿಗದಿಪಡಿಸಲಾಗಿದೆ.
ಆ)	ಇತರೆ ಅಭಿವೃದ್ಧಿ ಇಲಾಖೆಗಳಲ್ಲಿ ತತ್ಸಮಾನ ಶ್ರೇಣಿಯ ಸಿಬ್ಬಂದಿಗೆ ನೀಡುವ ವೇತನ ಮೀನುಗಾರಿಕೆ ಇಲಾಖೆಗೂ ಅನ್ವಯಿಸುತ್ತಿಲ್ಲವೇಕೆ;	ವಿವಿಧ ಇಲಾಖೆಗಳ ಅಧಿಕಾರಿ / ಸಿಬ್ಬಂದಿಗಳ ಕರ್ತವ್ಯ, ಜವಾಬ್ದಾರಿಗಳು, ಕಾರ್ಯವ್ಯಾಪ್ತಿ, ಕರ್ತವ್ಯದ ಸ್ವರೂಪ, ನೈಪುಣ್ಯತೆ, ಶಾಸನಬದ್ಧ ಕರ್ತವ್ಯಗಳು ವಿಭಿನ್ನವಾಗಿರುತ್ತವೆ. ಅವರುಗಳ ವಿದ್ಯಾರ್ಹತೆ, ಕಾರ್ಯಸ್ವರೂಪ ಮುಂತಾದವು ಗಳನ್ನು ಅವಲೋಕಿಸಿ ಆಯಾ ಹುದ್ದೆಗೆ ತಕ್ಕಂತೆ ವೇತನವನ್ನು ವೇತನ ಆಯೋಗವು ನಿಗದಿಪಡಿಸಿರುವಂತೆ ನೀಡಲಾಗುವುದು. ಒಂದು ಇಲಾಖೆಯ ವೇತನ ಶ್ರೇಣಿಯನ್ನು ಇನ್ನೊಂದು ಇಲಾಖೆಗೆ ಅನ್ವಯಿಸುವುದು ವೈಜ್ಞಾನಿಕವಾಗಿ ಸಮಂಜಸವಲ್ಲ.

[illegible]	ಕಡಿಮೆ ಇದ್ದಲ್ಲಿ ವೇತನ ಶ್ರೇಣಿ ಪರಿಷ್ಕರಣೆ ಮಾಡಲು ಸರ್ಕಾರದಿಂದ ಯಾವ ಕ್ರಮ ಕೈಗೊಳ್ಳಲಾಗುವುದು; ಹಾಗೂ ಯಾವ ಕಾಲಮಿತಿಯೊಳಗೆ ಸರಿಪಡಿಸಲಾಗುವುದು?	ಅನ್ವಯಿಸುವುದಿಲ್ಲ.

ಸಂಖ್ಯೆ: ಪಸಂಮೀ ಇ-31 ಮೀಇಯೋ 2020

(ಕೋಟ ಶ್ರೀನಿವಾಸ ಪೂಜಾರಿ)
ಮುಜರಾಯಿ, ಮೀನುಗಾರಿಕೆ ಹಾಗೂ
ಬಂದರು ಮತ್ತು ಒಳನಾಡು ಜಲಸಾರಿಗೆ ಸಚಿವರು